ಅಧಿಕಾರ ವಿಕೇಂದ್ರೀಕರಣದ ವಿಚಾರದಲ್ಲಿ ಹೇಳುವುದಾದರೆ, ಯಾವ ಅಧಿಕಾರ ಕೇಂದ್ರ ಆಫೀಸಿನಲ್ಲಿತ್ತು, ಆದರಲ್ಲಿ ಬಹಳಷ್ಟು ಅಧಿಕಾರವನ್ನು ಡಿವಿಜನಲ್, ಡಿಸ್ಟ್ರಿಕ್ಟ್ ಮತ್ತು ಅದಕ್ಕಿಂತ ಕೆಳಮಟ್ಟಕ್ಕೆ ವರ್ಗಾಯಿಸಿದ್ದೇವೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಗೆ, ಪ್ರತಿಯೊಬ್ಬ ಅಸಿಸ್ಟೆಂಟ್ ಕಮೀಷನರಿಗೆ, ತಹಶೀಲ್ದಾರರಿಗೆ ಮತ್ತು ಬಿ. ಡಿ. ಓ. ಗಳಿಗೆ ನಾವು ಈಗಾಗಲೇ ಸೂಚನೆ ನೀಡಿ, ಕಚೇರಿ ಇರತಕ್ಕ ದಿನಗಳಲ್ಲಿ ಪ್ರತಿ ದಿವಸ ಬೆಳಿಗ್ಗೆ ನಿರ್ದಿಷ್ಟವಾಗಿ ಒಂದು ಗಂಟೆ ಕಾಲ ಸಾರ್ವಜನಿಕರನ್ನು ಭೇಟಿ ಮಾಡಲಿಕ್ಕೆ ವ್ಯವಸ್ಥೆ ಮಾಡಲಿಕ್ಕೆ ಬೇಕೆಂದು ಹೇಳಿದ್ದೇವೆ. ಯಾರಾದರೂ ಯಾವುದಾದರೂ ಸಮಸ್ಯೆಯನ್ನು ತಂದರೆ ಅವರನ್ನು ನೇರವಾಗಿ ಭೇಟಿಯಾಗುವುದಕ್ಕೆ ಅವಕಾಶ ಕೊಡಬೇಕು. ಅವರು ಅಪಾಯಿಂಟ್‌ಮೆಂಟ್ ತೆಗೆದುಕೊಂಡು ಬರತಕ್ಕದ್ದಲ್ಲ, ಪ್ರತಿ ತಿಂಗಳು ಎಷ್ಟು ಕೇಸುಗಳು ಬರುತ್ತವೆ ಮಂತ್ತು ಅವುಗಳ ಪೈಕಿ ಸ್ಥಳದಲ್ಲೇ ಎಷ್ಟಕ್ಕೆ ತೀರ್ಮಾನ ಕೊಡುತ್ತಾರೆ ಎಂಬ ಬಗ್ಗೆ ಪ್ರತಿ ತಿಂಗಳು ವರದಿ ಕಳುಹಿಸಬೇಕೆಂದು ಸೂಚಿಸಿದ್ದೇವೆ. ಮಹಾರಾಷ್ಟ್ರದ ಅಹಮದ್‌ನಗರದ ಜಿಲ್ಲಾಧಿಕಾರಿಗಳ ಬಗ್ಗೆ ಮರಾಠಿ ಪತ್ರಿಕೆಯಲ್ಲಿ ಬಂದಂತಹ ಒಂದು ಲೇಖನವನ್ನು ನೋಡಿದೆ. ಆ ಜಿಲ್ಲಾಧಿಕಾರಿಗಳು ತಮ್ಮ ಆಡಳಿತದಲ್ಲಿ ಒಂದು ಸಣ್ಣ ಕ್ರಾಂತಿಯನ್ನೇ ಮಾಡಿದ್ದಾರೆ. ಅಂದರೆ ಕೆಲಸ ಅವರು ಕೆಲಸ ಮಾಡತಕ್ಕೆ ಕಾಲದಲ್ಲಿ ಮತ್ತು ಜನರ ಜೊತೆಗೆ ವ್ಯವಹಾರ ಮಾಡತಕ್ಕ ಕಾಲದಲ್ಲಿ ಯಾವ ರೀತಿ ನಡೆದುಕೊಂಡರು ಎಂಬುದು ಮುಖ್ಯ. ಆ ಬಗ್ಗೆ ಬಂದಿರತಕ್ಕ ಲೇಖನವನ್ನು ಕನ್ನಡ ಮತ್ತು ಇಂಗ್ಲೀಷಿಗೆ ತರ್ಜಮೆ ಮಾಡಿಸಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟು ಅದೇ ಮಾದರಿಯಲ್ಲಿ ನೀವೂ ಕೂಡ ನಿಮ್ಮ ಕಚೇರಿಯಲ್ಲಿ ಕೆಲಸ ಮಾಡಬೇಕೆಂದು ಹೇಳಿದ್ದೇನೆ. ಮೊದಲು ಜಮಾಬಂಧಿ ಪದ್ಧತಿ ಇತ್ತು. ಅದು ಇದ್ದಾಗ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳು ಜನತೆಯ ಜೊತೆಯಲ್ಲಿ ನೇರವಾಗಿ ಸಂಪರ್ಕ ಇಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಮಧ್ಯದಲ್ಲಿ ಅದು ನಿಂತುಹೋಯಿತು ಈಗ ಮತ್ತೆ ಅದನ್ನು ಮಾಡಬೇಕೆಂದು ಹೇಳಿದ್ದೇನೆ. ಅಧಿಕಾರಿಗಳು ಪ್ರವಾಸ ಹೋದಾಗ ಹಳ್ಳಿಯಲ್ಲಿರತಕ್ಕ ಜನರೆಲ್ಲರನ್ನೂ ಕರೆಯಬೇಕು ಮತ್ತು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಲಿಕ್ಕೆ ನೇರವಾಗಿ ಪ್ರಯತ್ನ ಮಾಡಬೇಕೆಂದು ಹೇಳಿದ್ದೇನೆ. ಎರಡನೆಯದಾಗಿ, ಆಡಳಿತಕ್ಕೆ ಸಂಬಂಧಪಟ್ಟ ಹಾಗೆ ಗಡಚು ವಿಚಾರ ಬಂದಾಗ ಮತ್ತು ಮಾಹಿತಿ ಸಂಗ್ರಹಿಸಲು ಬಹಳಷ್ಟು ಸಿಬ್ಬಂದಿ ವರ್ಗ ಬೇಕಾದಾಗ, ಮತ್ತಿತರ ಸಂದರ್ಭಗಳಲ್ಲಿ ಕಂಪ್ಯೂಟರನ್ನು ಬಳಸಿ ಆದರ ಮೂಲಕ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸತಕ್ಕ ವ್ಯವಸ್ಥೆ ಮಾಡಬೇಕೆಂದು ಮಾಡಿದ್ದೇವೆ. ಅದೂ ಕೂಡ ಈಗಾಗಲೇ ಆಗಿದೆ. ಇನ್ನು ಕಾಪಿ ಮಾಡತಕ್ಕದ್ದರ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ಯಾವುದೇ ಒಂದು ನಕಲು ಸಿಗಬೇಕಾದರೆ ಒಂದೆರಡು ವಾರಗಳು ಬೇಕಾಗುತ್ತಿತ್ತು. ಅದಕ್ಕೆ ಕಾರಣ, ಪ್ರತಿಯೊಂದು ಜಿಲ್ಲಾ ಕಚೇರಿಗಳಲ್ಲಿ ಮಾತ್ರವಲ್ಲ ತಾಲ್ಲೂಕು ಕಚೇರಿಗಳಲ್ಲೂ ಕೂಡ ಕಾಪಿ ಪೆಂಡಿಂಗ್‌ಗಳನ್ನು ಇಡಬೇಕೆಂದು ಮಾಡಿದ್ದೇವೆ. ಆಗ ಜನರಿಗೆ ಕಾಪಿ ಬೇಕಾದಾಗ ಐ ನಿಮಿಷದಲ್ಲಿ ಕಾಪಿಗಳನ್ನು ಕೊಡಬಹುದು. ಈ ರೀತಿಯಾಗಿ ಅನೇಕ ಪ್ರಚಾರಗಳಲ್ಲಿ ಆಧುನೀಕರಣಕ್ಕೆ ಸಂಬಂಧಪಟ್ಟ ಹಾಗೆ ಅನೇಕ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ತುಂಗಭದ್ರಾ ಜಲಾಶಯಕ್ಕೆ ಪಾಲಿ ಪೈಪರ್ ಕಂಪನಿಯಿಂದ ಕಲ್ಕುಶಗಳನ್ನೊಳಗೊಂಡ ನೀರನ್ನು ಬಿಡುತ್ತಿರುವುದು

ಶ್ರೀ ಕೆ. ಪೆಟ್. ಕಾರಡಗಿ (ಮುಂಡರಗಿ).—

(೧೧೮೬) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

ಅ) ತುಂಗಭದ್ರಾ ಜಲಾಶಯಕ್ಕೆ ಪಾಲಿ ಪೈಪರ್ ಕಂಪನಿಯಿಂದ ಬಂದ ನೀರನ್ನು ಬಿಡುವುದರಿಂದ ಮುಂಡರಗಿ ತಾಲ್ಲೂಕಿನ ಜನರಿಗೆ ಮತ್ತು ದನಕರುಗಳಿಗೆ ತೊಂದರೆಯಾಗುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಆ ಬಗ್ಗೆ ಸರಕಾರದವರು ಕೈಗೊಂಡಿರುವ ಕ್ರಮವೇನು ?

ಆ) ಇದರಿಂದಾಗಿ ಜನರ ಆರೋಗ್ಯ ಕೆಡುತ್ತಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ಮತ್ತು ಹಾಗಿದ್ದಲ್ಲಿ ಆ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು ?

X X X X X

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

ತಾರೀಖು ೧೩, ೧೪ ಈ ಎರಡು ದಿನಗಳಲ್ಲಿ ವಿದ್ಯುಚ್ಛಕ್ತಿಯ ಪೂರೈಕೆ ನಿಂತಿದ್ದರಿಂದ ಕಲುಷಿತ

Reply not Received.

ನೀರನ್ನು ಬಿಟ್ಟರು ಅದನ್ನು ಬಿಟ್ಟ ಮೇಲೆ ಮಾನಸಂಗಳು ಸತ್ತ ಬಗ್ಗೆ ವರದಿ ಬಂತು. ವರದಿ ಬಂದ ಕೂಡಲೇ ಮಂಡಲಿಯವರು ೧೬-೨-೮೪ ರಲ್ಲಿ ತಡೆಯಾಜ್ಞೆ ಕೊಟ್ಟರು. ಪುನಃ ಅಧಿಕಾರಿಗಳು ಹೋಗಿ ಪರಿಶೀಲನೆ ಮಾಡಿ ೧೯-೨-೮೪ರಂದು ಆಲ್ಲಿ ನೀರು ಬಿಡುವುದಕ್ಕೆ ಆದೇಶ ಕೊಟ್ಟರು. ಆ ಪ್ರಕಾರ ನೀರು ಬಿಟ್ಟಿದ್ದಾರೆ. ಈಗ ಹೊಸದಾಗಿ ಈ ನಿಯಂತ್ರಣ ಮಾಡತಕ್ಕ ಯಂತ್ರವನ್ನು ಕೂಡಿಸಿದ್ದಾರೆ. ಇದನ್ನು ೩೧-೧೨-೮೩ರಲ್ಲಿ ಕೂಡಿಸಿದ್ದು ಇದು ಸ್ಥಿರೀಕರಣ ಹೊಂದಬೇಕಾಗಿದೆ. ವಿದ್ಯುಚ್ಛಕ್ತಿ ಇಲ್ಲದೇ ಇರುವುದರಿಂದ ಈ ರೀತಿ ಆಗಿತ್ತು. ಅವರದೇ ಆದ ವಿದ್ಯುಚ್ಛಕ್ತಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದ ನಾವು ಅವರಿಗೆ ಆದೇಶ ಕೊಟ್ಟಿದ್ದೇವೆ.

ಶ್ರೀ ಕೆ. ಎಚ್., ಕೂರಡಗಿ.— ಮಾನ್ಯ ಮಂತ್ರಿಗಳು 'ಅ' ಪ್ರಶ್ನೆಗೆ ಉತ್ತರ ಕೊಡುತ್ತಾ ನೀರು ಕುಡಿದು ರೋಗ ಬಂದಿದ್ದರ ಬಗ್ಗೆ ಉದಾಹರಣೆಗಳಿಲ್ಲ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಸಾಕಷ್ಟು ಮಂದಿ ಮಹಾ ರೋಗದಿಂದ ಹೊಳೆ ದಂಡೆಯಲ್ಲಿ ಬಳಲುತ್ತಿದ್ದಾರೆ. ಅಲ್ಲಿ ಹೋಗಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಈ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮುಂಡರಗಿ ತಾಲ್ಲೂಕಿನಲ್ಲಿ ಜನ ಮಹಾ ರೋಗದಿಂದ ಬಳಲುವುದಕ್ಕೆ ಕಾರಣ ಬೇರೆ ಇದೆ. ಈ ನೀರು ಕುಡಿಯುವುದರಿಂದ ಅಲ್ಲ.

ಶ್ರೀ ಕೆ. ಎಚ್. ಕೂರಡಗಿ.— ನೀರು ಕುಡಿದಿದ್ದುಂದ ರೋಗ ಬಂದಿದೆ ಎಂದು ತಜ್ಞರು ಹೇಳಿದ್ದಾರೆ. ಅದರ ವರದಿ ಇದೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ರಿಪೋರ್ಟ್ ಇದ್ದರೆ ದಯವಿಟ್ಟು ಕೊಡಿ. ಪುನಃ ಅಧಿಕಾರಿಗಳನ್ನು ಕಳುಹಿಸಿ ವಿಚಾರ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಎನ್. ಆರ್. ಪುರ ತಾಲ್ಲೂಕಿನ ಭೈರೇಖಾನ್ ಎಸ್ಟೇಟಿನ ಕಾರ್ಮಿಕರ ವಿರುದ್ಧ ನಡೆಸಿದ ದಬ್ಬಾಳಿಕೆ

(೧೨೦೨) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).— ಈ ಕೆಳಕಂಡ ಪ್ರಶ್ನೆಗಳಿಗೆ ಒಳಾಡಳಿತ ಹಾಗೂ ರಾಷ್ಟ್ರೀಯ ಉಳಿತಾಯ ಯೋಜನಾ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಮಗಳೂರು ಜಿಲ್ಲೆಯ ಎನ್. ಆರ್. ಪುರ ತಾಲ್ಲೂಕು ಭೈರೇಖಾನ್ ಎಸ್ಟೇಟಿನ ಕಾರ್ಮಿಕರು ಎಪಟಿಯೊಸಿ ಕಾರ್ಮಿಕ ಸಂಘವನ್ನು ಸೇರಿದರೆಂಬ ಕಾರಣದಿಂದ ಆವರ ಮೇಲೆ ಮಾಲೀಕರ ಗೂಂಡಾಗಳು ಪೋಲೀಸರೂ ದಬ್ಬಾಳಿಕೆ ನಡೆಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಮಾಲೀಕರ ಗೂಂಡಾಗಳು ಪೋಲೀಸರ ಎದುರಿನಲ್ಲಿ ಕಾರ್ಮಿಕರನ್ನು ಹೊಡೆಯುತ್ತಿದ್ದರೂ ಸಹ ಪೋಲೀಸರು ಗೂಂಡಾಗಳ ಮೇಲೆ ಕ್ರಮ ಕೈಗೊಂಡಿಲ್ಲ, ಆದರೆ ದೂರು ಕೊಟ್ಟ ಕಾರ್ಮಿಕರನ್ನೇ ಠಾಣೆಯ ಒಳಗೂ ಹೊರಗೂ ಹೊಡೆದು ಅವರ ಮೇಲೆ ಸುಳ್ಳು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು? (ಕಾರ್ಮಿಕರು ಮತ್ತು ಗೂಂಡಾಗಳ ವಿವರಗಳೊಂದಿಗೆ)

ಈ) ಕಾರ್ಮಿಕರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಂಡು ಗೂಂಡಾಗಳನ್ನು ದಮನ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮುಖ್ಯಮಂತ್ರಿಗಳವರು ಇದನ್ನು ಉತ್ತರಿಸುವರು)

ಅ) ಬಂದಿಲ್ಲ,

ಆ) ಬಂದಿಲ್ಲ.

ಇ) (ಅ) ಮತ್ತು (ಆ) ಕ್ಕೆ ಸಂಬಂಧಿಸಿದುದು ಇಲ್ಲ. ಆದರೆ ಕಾರ್ಮಿಕರು ಪೋಲೀಸರ ಮೇಲೆ ಹಲ್ಲೆ ಮಾಡಿದ ಕಾರಣ ಲಿಂಗದಹಳ್ಳಿ ಪೋಲೀಸ್ ಠಾಣೆ ಮೊಕದ್ದಮೆ ನಂ. ೭-೮೪ ಕಲಂ ೧೪೮, ೩೫೧, ೫೦೦ ಭಾ. ದಂ. ಸಂ. ಮತ್ತು ನರಸಿಂಹರಾಜಪುರ ಪೋಲೀಸ್ ಠಾಣೆ ಮೊಕದ್ದಮೆ ನಂ. ೭-೮೪ ಕಲಂ ೧೪೮, ೧೪೨, ೩೪೧, ೩೫೩, ೩೨೪, ೫೦೬ ಮತ್ತು ೧೪೯ ಭಾ. ದಂ. ಸಂ. ಕೇಸುಗಳು ಕಾರ್ಮಿಕರುಗಳ ವಿರುದ್ಧ ದಾಖಲಾಗಿರುತ್ತದೆ.

ಈ) ಕಾರ್ಮಿಕರೇ ಪೋಲೀಸರ ಮೇಲೆ ಹಲ್ಲೆ ಮಾಡಿದ ಕಾರಣ ಮತ್ತು ಪೋಲೀಸರಿಗೆ ತೀವ್ರ ಗಾಯಗಳಾದವಾಗ್ಯೂ ಅವರನ್ನು ತಡೆದು ಚಿಕಿತ್ಸೆಗೆ ಅವಕಾಶ ಮಾಡಿಕೊಡದೆ ಸಶಸ್ತ್ರ ಪಡೆ ಬರುವವರೆಗೂ ಪೋಲೀಸರನ್ನು ತಡೆಹಿಡಿದ ಕಾರಣ ಮೊಕದ್ದಮೆಗಳನ್ನು ಹಿಂಪಡೆ ತೆಗೆದುಕೊಳ್ಳುವುದು ಸರಿಯಿಲ್ಲ.